01-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 3

S.S.L.C. MODEL QUESTION PAPER - 3 : 2026 - 27

ವಿಷಯ : ಪ್ರಥಮ ಭಾಷೆ – ಕನ್ನಡ

Subject : First Language — KANNADA

ವಿಷಯ ಸಂಕೇತ : 01-K **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 100] [Max. Marks : 100

ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **6 X 1 = 6**

1. ವರ್ಗೀಯ ವ್ಯಂಜನದ ಪ್ರಥಮ ಹಾಗೂ ತೃತೀಯಾಕ್ಷರಗಳು

   (ಎ) ಅನುನಾಸಿಕಗಳು

   (ಬಿ) ಅಲ್ಪಪ್ರಾಣಾಕ್ಷರಗಳು

   (ಸಿ) ಯೋಗವಾಹಗಳು

   (ಡಿ) ಮಹಾಪ್ರಾಣಾಕ್ಷರಗಳು

2. 'ಅಷ್ಟೈಶ್ವರ್ಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ವೃದ್ಧಿ

   (ಬಿ) ಯಣ್

   (ಸಿ) ಜಶ್ತ್ವ

   (ಡಿ) ಶ್ಚುತ್ವ

3. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ ಬಳಸುವ ಲೇಖನ ಚಿಹ್ನೆ

   (ಎ) ಪೂರ್ಣವಿರಾಮ

   (ಬಿ) ಅಲ್ಪವಿರಾಮ

   (ಸಿ) ಅರ್ಧವಿರಾಮ

   (ಡಿ) ಭಾವಸೂಚಕ

4. ಭೂತಕಾಲ ಸೂಚಕ ಪ್ರತ್ಯಯವಿದು

   (ಎ) ದ

   (ಬಿ) ವ

   (ಸಿ) ಉತ್ತ

   (ಡಿ) ಉವ

5. 'ಕರಣಾರ್ಥ' ಎಂಬುದು ಈ ವಿಭಕ್ತಿಯ ಕಾರಕಾರ್ಥ

   (ಎ) ಚತುರ್ಥೀ

   (ಬಿ) ದ್ವಿತೀಯಾ

   (ಸಿ) ಪಂಚಮೀ

   (ಡಿ) ತೃತೀಯಾ

6. 'ಇಮ್ಮಾವು' ಪದವು ಈ ಸಮಾಸಕ್ಕೆ ಸೇರಿದೆ

   (ಎ) ದ್ವಿಗು

   (ಬಿ) ಅಂಶಿ

   (ಸಿ) ಕರ್ಮಧಾರಯ

   (ಡಿ) ತತ್ಪುರುಷ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : **4 X 1 = 4**

7. ವ್ಯಯ : ಬೀಯ : : ಪ್ರಾಣ : ..... .
8. ಹನ್ನೆರಡು : ಸಂಖ್ಯಾವಾಚಕ : : ಮೂಡಣ : ..... .
9. ಬೆಟ್ಟಗುಡ್ಡ : ಜೋಡುನುಡಿ : : ಮೆಲ್ಲಮೆಲ್ಲನೆ : ..... .
10. ಬಳೆಗಾರ : ತದ್ಧಿತಾಂತ ನಾಮ : : ನನಗೋಸ್ಕರ : ..... .

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **7 X 1 = 7**

11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು?
12. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
13. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
14. ಕೌಸಂಬಿಯ ಅರಸ ಯಾರು?
15. ಹಲಗಲಿ ಗ್ರಾಮ ಎಲ್ಲಿದೆ?
16. ದ್ರೋಣನು ಪರುಶುರಾಮರಲ್ಲಿಗೆ ಏಕೆ ಬಂದನು?
17. ಒಡೆಯನ ಮನೆ ಅಂಗಳದಲ್ಲಿ ಮಾವಿನ ಮರಗಳು ಹೇಗೆ ಬೆಳೆದು ನಿಂತಿವೆ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **10 X 2 = 20**

18. ಲಿಪಿಯ ಜಾಡು ಹೇಗೆ ಆರಂಭಗೊಂಡಿತು?
19. ಸ್ವಯಂ ಚಾಲಿತ ಬಾಗಿಲುಗಳ ಅನ್ವೇಷಣೆಯಲ್ಲಿ ವಿಶ್ವೇಶ್ವರಯ್ಯನವರ ಕೊಡುಗೆ ಕುರಿತು ಬರೆಯಿರಿ.
20. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
21. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?
22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?
24. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣಹೋಮದಿಂದ ತೆಗೆದುಕೊಂಡ ನಿರ್ಧಾರವನ್ನು ತಿಳಿಸಿ.
25. ಗಾಂಧೀಜಿಯವರು 'ಅನ್‌ಟು ದಿಸ್ ಲಾಸ್ಟ್' ಕೃತಿಯ ಸಿದ್ಧಾಂತಗಳನ್ನು ಹೇಗೆ ಅರ್ಥೈಸಿಕೊಂಡರು?
26. ಜ್ಞಾನಿ–ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವನ್ನು ತಿಳಿಸಿ.
27. ರಾಜರ ಪ್ರಕೃತಿ ಹೇಗಿರುತ್ತದೆ?

V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : **2 X 3 = 6**

28. ದೇವನೂರ ಮಹಾದೇವ
29. ಕುವೆಂಪು

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : **1 X 3 = 3**

30. ಆ ರವಮಂ ನಿರ್ಜಿತ ಕಂ
ಠೀರವರವಮಂ ನಿರಸ್ತಘನರವಮಂ ಕೋ

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : **1 X 3 = 3**

31. "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"

VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : **1 X 3 = 3**

32. ಮನಸ್ಸಿದ್ದರೆ ಮಾರ್ಗ.

ಅಥವಾ

ಅತಿ ಆಸೆ ಗತಿಗೇಡು.

IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : **6 X 3 = 18**

33. "ಒಂದು ಕ್ಷಣವಾದರೂ ಹುಲಿಗೆ ಅವರ ಮುಖದರ್ಶನವಾಗಲಿಲ್ಲ"
34. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."
35. "ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?"
36. "ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ"
37. "ನೆಲಕಿಜೆವೆನೆಂದು ಬಗೆದಿರೆ ಚಲಕಿಜೆವೆಂ"
38. "ಅರಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ"

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 X 4 = 4**

39. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

.....

.....

.....

.....

ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

ಅಥವಾ

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ

.....

.....

.....

.....

ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 X 4 = 4

40. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8

41. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು. ಈ ಹೇಳಿಕೆಯನ್ನು ಸಮರ್ಥಿಸಿ.

ಅಥವಾ

ಮತಂಗಾಶ್ರಮಕ್ಕೆ ಬಂದ ಶ್ರೀರಾಮ ಶಬರಿಯರ ನಡುವಿನ ಸಂಭಾಷಣೆಯನ್ನು ಸಂಗ್ರಹಿಸಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

42. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳನ್ನು ಕುರಿತು ಬರೆಯಿರಿ.

ಅಥವಾ

ಪಾಂಡವರ ರಕ್ಷಣೆಗೆ ನಿಂತ ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ವಿವರಿಸಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 X 4 = 4 (2+2)

43. ಹಾವೇರಿಯು ಧಾರವಾಡದ ದಕ್ಷಿಣದಲ್ಲಿರುವ ಒಂದು ಊರು. ಅದರ ಹತ್ತಿರದ ಸಂಗೂರಿನಲ್ಲಿ ಒಂದು ಶಿಲಾಶಾಸನವಿದೆ. ಇದರಲ್ಲಿ ಸುಂದರವಾದ ಪುರುಷ ವಿಗ್ರಹವನ್ನು ನೋಡಬಹುದು. ಅದು ಗಂಡುಗಲಿ ಕುಮಾರರಾಮನದು. ತುಮಕೂರು ಜಿಲ್ಲೆಯ ದೊಡ್ಡಪಾಲನಹಳ್ಳಿಯಲ್ಲಿ ಕುಮಾರರಾಮನ ಗುಡಿಯಿದೆ. ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಹಿರಿಯರು ಕುಮಾರರಾಮನ ಕಥೆ ಹೇಳುತ್ತಾರೆ. ಜನರು ಶ್ರದ್ಧೆಭಕ್ತಿಯಿಂದ ಆಲಿಸುತ್ತಾರೆ. ಕುಮಾರರಾಮನು ಪರಮ ಪ್ರತಾಪಿಯಾಗಿದ್ದ ಮುಮ್ಮಡಿ ಸಿಂಗನಾಯಕನ ಮೊಮ್ಮಗ. ೧೩ನೆಯ ಶತಮಾನದ ಕಡೆಯಲ್ಲಿ ಸಿಂಗನಾಯಕನೆಂದರೆ ಸೋಲರಿಯದ ಸರದಾರನೆಂದೇ ಹೆಸರಾಗಿದ್ದ. ಇವನ ವಿರುದ್ಧ ಕತ್ತಿ ಎತ್ತಿದವರೆಲ್ಲ ಹತರಾಗಿದ್ದರು. ಹರಿಹರದಿಂದ ನೆಲ್ಲೂರಿನವರೆಗೆ, ಚಿತ್ರದುರ್ಗದಿಂದ ಕರ್ನೂಲಿನವರೆಗೆ ಅವನ ರಾಜ್ಯ ವಿಸ್ತರಣೆಯಾಗಿತ್ತು. ಮುಮ್ಮಡಿ ಸಿಂಗನಾಯಕನು ವೃದ್ಧಾಪ್ಯದಿಂದ ಮರಣ ಹೊಂದಿದಾಗ ಆತನ ಮಗ ಕಂಪಿಲನಿಗೆ ಇನ್ನೂ ಎಳೆಯ ವಯಸ್ಸು. ತಾಯಿ ಮಾದನಾಗತಿ ಧೈರ್ಯಗೆಡದೆ ಮಗನನ್ನು ಬೆಳೆಸಿದಳು. ಮಂತ್ರಿ ಬೈಚಪ್ಪನೂ ಕೂಡ ರಾಜ್ಯ ಅನಾಯಕನಾಗದಂತೆ ದಕ್ಷತೆಯಿಂದ ನೋಡಿಕೊಂಡನು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ರಾಜ್ಯಕ್ಕೆ ಕ್ಷಾಮ ಬಂದು ಹನೆಯ ದುರ್ಗದ ಸುತ್ತಲೂ ಹಸಿರು ಒಣಗಿತು. ಮಳೆ ಬೆಳೆ ಆಗದೆ ದವಸ ಧಾನ್ಯಗಳ ಸುಳಿವಿಲ್ಲ. ಪಶು ಪಕ್ಷಿಗಳೆಲ್ಲ ಮೇವು ನೀರಿಲ್ಲದೆ ಒದ್ದಾಡಿ ಸತ್ತವು. ರಾಣಿ ಮತ್ತು ಮಂತ್ರಿ ಬೈಚಪ್ಪ ಪ್ರಜಾಜನರೊಡನೆ ಉತ್ತರಕ್ಕೆ ವಲಸೆ ಹೋಗಿ ಜಟ್ಟಂಗಿ ರಾಮಗಿರಿಯ ಬುಡದಲ್ಲಿ ಬಿಡು ಬಿಟ್ಟರು. ಅಲ್ಲಿಂದ ವಿಸ್ತಾರವಾದ ಹೊಸಮಲೆಯ ಅರಣ್ಯಕ್ಕೆ ಕಂಪಿಲನ ಪರಿವಾರ ಪಯಣಿಸಿತು. ಇದು ಮುಂದೆ ಹೊಸಮಲೆ ದುರ್ಗವೆಂದೆ ಹೆಸರಾಯಿತು. ಹೊಸಮಲೆ ರಾಜ್ಯಕ್ಕೆ ಕಂಪಿಲನೇ ರಾಜನಾದನು. ಹರಿಯಾಲದೇವಿ ಕಂಪಿಲನ ಪಟ್ಟದ ರಾಣಿಯಾದಳು. ಈ ರಾಜ ದಂಪತಿ ಕುಲದೇವರಾದ ಜಟ್ಟಂಗಿ ರಾಮೇಶ್ವರನಿಗೆ ಭಕ್ತಿಯಿಂದ ನಡೆದುಕೊಂಡರು. ತಮಗೆ ಪುರುಷೋತ್ತಮನಾದ ಪ್ರಭು ರಾಮಚಂದ್ರನಂತಿರುವ ಪುತ್ರ ಜನಿಸಲೆಂದು ಬೇಡಿಕೊಂಡರು. ಅದರಂತೆ ಗಂಡು ಮಗುವಿನ ಜನನವಾಯಿತು. ಈ

ಮಗುವಿಗೆ ಕುಮಾರರಾಮನೆಂದು ನಾಮಕರಣ ಮಾಡಿದರು. ಇವನು ಓದು ಬರೆಹ ಕ್ಷತ್ರಿಯೋಚಿತ ವಿದ್ಯೆಗಳನ್ನು ಕರಗತ ಮಾಡಿಕೊಂಡನು. ೧೬ ವರ್ಷ ಕಳೆಯುವ ವೇಳೆಗೆ ಅಂಗಸಾಧನೆ, ಗಜತುರಗದೇರಾಟ ಶರಪ್ರಯೋಗ ಹಾಗೂ ಕತ್ತಿವರಸೆಗಳಲ್ಲಿ ಪ್ರವೀಣನಾದನು. ಕುಮಾರರಾಮನು ಯುದ್ಧ ವಿದ್ಯೆ ಮಾತ್ರವಲ್ಲ, ಸದ್ಗುಣಗಳನ್ನು ರೂಢಿಸಿಕೊಂಡನು. ದೇವರು ದೇಶ ಧರ್ಮ ಗುರುಹಿರಿಯರ ವಿಷಯದಲ್ಲಿ ವಿನಮ್ರತೆಯಿಂದ ವರ್ತಿಸುವ ಬಗೆಯನ್ನು ಕಲಿತುಕೊಂಡನು. ಕುಮಾರರಾಮನ ಕೀರ್ತಿ ಗಿರಿ ಕಾನನ ದಾಟಿ ನೆರೆ ರಾಜ್ಯಗಳಲ್ಲೂ ವ್ಯಾಪಿಸಿತು. ಈತನ ಹೆಸರು ಕೇಳಿದರೆ ಹಗೆಗಳ ಹೃದಯ ಕಂಪಿಸುತ್ತಿತ್ತು.

ಪ್ರಶ್ನೆಗಳು :

ಅ. ಕುಮಾರರಾಮನು ಯಾವ ಯಾವ ವಿದ್ಯೆಗಳನ್ನು ರೂಢಿಸಿಕೊಂಡನು?

ಆ. ಕಂಪಿಲ ದಂಪತಿಗಳಿಗೆ ಕುಮಾರ ರಾಮನ ಜನನವಾದ ಬಗೆಯನ್ನು ತಿಳಿಸಿ.

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5

44. ನಿಮ್ಮನ್ನು ತುಮಕೂರಿನ ಸಿದ್ಧಗಂಗಾ ನಗರದಲ್ಲಿ ವಾಸವಿರುವ 'ರಾಕೇಶ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಎದುರಿಸುತ್ತಿರುವ ಕಸ ವಿಲೇವಾರಿ ಸಮಸ್ಯೆಯನ್ನು ಕುರಿತು, ನಗರ ಪಾಲಿಕೆಯ ಮುಖ್ಯಾಧಿಕಾರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸಹನಾ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಕನ್ನಡ ಸಂಘದಿಂದ ಆಯೋಜಿಸಿದ ಕನ್ನಡ ಭಾವಗೀತೆಗಳ ಗಾಯನ ಸ್ಪರ್ಧೆಯನ್ನು ಕುರಿತು ರಾಯಚೂರಿನ ಗಾಂಧಿನಗರದಲ್ಲಿ ವಾಸವಾಗಿರುವ 'ಸಂಜನಾ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5

45. ರಾಷ್ಟ್ರೀಯ ಭಾವೈಕ್ಯ.

ಅಥವಾ

ಜಾಗತಿಕ ಯುದ್ಧಗಳಿಂದ ಸಾಮಾನ್ಯ ಜನರ ಮೇಲೆ ಆಗುವ ಪರಿಣಾಮ.